# ವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಅರಕಲಗೂಡು

**ಸಿ ಸಿ ನಂ:1027/2018**

| | | | | |
|---|---|---|---|---|
| **ಸಾಕ್ಷಿಯ ಹೆಸರು** | : ಶಿವರಾಜ್ ಆರ್ ಮುದೋಳ್ | **ದಿನಾಂಕ** | : | **22/08/2024** |
| **ತಂದೆಯ ಹೆಸರು** | : ರಾಮಚಂದ್ರಪ್ಪ | **ಸಿ ಡಬ್ಲ್ಯೂ** | : | **17** |
| **ವಯಸ್ಸು** | : **44** ವರ್ಷ | **ಪಿ ಡಬ್ಲ್ಯೂ** | : | **06** |
| **ಉದ್ಯೋಗ** | : ಸಿ.ಪಿ.ಐ, | | | |
| **ವಿಳಾಸ** | : ಗೋಣಿಕೊಪ್ಪ ವೃತ್ತ | | | |

ನಾನು ದಿ: **15.01.2017** ರಿಂದ **05.03.2019** ರವರೆಗೆ ಅರಕಲಗೂಡು ಪೊಲೀಸ್ ವೃತ್ತ ನಿರೀಕ್ಷಕನಾಗಿ ಕೆಲಸ ನಿರ್ವಹಿಸಿರುತ್ತೇನೆ.

ದಿ:**12-09-2018**ರಂದು ಈ ಪ್ರಕರಣದ ಕಡತವನ್ನು ಚಾಸಾ-16ರವರಿಂದ ಪರಿಶೀಲಿಸಿ ಪಡೆದುಕೊಂಡಿರುತ್ತೇನೆ. ದಿ:17-09-2018ರಂದು ಪ್ರಕರಣದಲ್ಲಿ ಅಪಘಾತವನ್ನು ಉಂಟುದ ಮಾಡಿದ ಕೆಎ-09-ಡಬ್ಲ್ಯೂ-3229ರ ಮೋಟಾರ್ ಸೈಲ್ ನ್ನು ಅದರ ಮಾಲೀಕರಾದ ಚಾಸಾ-4ರವರು ಕೊಣನೂರು ಪೊಲೀಸ್ ಠಾಣೆಗೆ ವಾಹನವನ್ನು ತಂದು ಹಾಜರು ಪಡಿಸಿದ ಮಾಹಿತಿಯನ್ನು ತಿಳಿಸಿದ ಮೇರೆಗೆ ನಾನು ಕೊಣನೂರು ಪೊಲೀಸ್ ಠಾಣೆಗೆ ತೆರಳಿ ಠಾಣೆಗೆ ಪಂಚರಾದ ಚಾಸಾ-5 ಮತುತ 6ರವರನ್ನು ಬರಮಾಡಿಕೊಂಡು ಸದರಿಯವರ ಸಮಕ್ಷಮ ಬೆಳಗ್ಗೆ 10.30 ರಿಂದ 11.15 ಗಂಟೆಯವರೆಗೆ ಅಮಾನತ್ತು ಮಹಜರ್ ನ್ನು ಜರುಗಿಸಿರುತ್ತೆನೆ.

ನಿಪಿ-4ನ್ನು ಸಾಕ್ಷಿಯ ನೋಡಿ ಗುರುತಿಸುತ್ತಿದ್ದಾರೆ. ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಡಿ) ಎಂದು ಗುರುತಿಸಾಯಿತು. ಅದೇ ದಿನ ವಾಹನ ಪರಿಶೀಲನೆ ಕುರಿತು ಚಾಸಾ-15ರವರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆ. ದಿ:11-10-2018ರಂದು ವಾಹನದ ಐ.ಎಂ.ವಿ. ವರದಿಯನ್ನು ಪಡೆದುಕೊಂಡಿರುತ್ತೇನೆ. ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ನಿಪಿ-5 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ದಿ:19-09-2018ರಂದು ಚಾಸಾ-4ರವರನ್ನು ವೃತ್ತ ಕಚೇರಿಗೆ ಬರಮಾಡಿಕೊಂಡು ಸದರಿಯವರಿಗೆ ಕಲಂ:133ರ ರೀತ್ಯಾ ನೋಟೀಸ್ ನ್ನು ಕೊಟ್ಟಿರುತ್ತೇನೆ. ದಿ:25-09-2018ರಂದು ಅದಕ್ಕೆ ಉತ್ತರವನ್ನು ಅವರಿಂದ ಪಡೆದುಕೊಂಡಿರುತ್ತೇನೆ. ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅವುಗನ್ನು ನಿಪಿ-6 ಮತ್ತು ನಿಪಿ-7 ಅವುಗಳಲ್ಲಿ ಸಾಕ್ಷಿಯ ಸಹಿಗಳನ್ನು ನಿಪಿ-6(ಎ) ಮತ್ತು ನಿಪಿ-7(ಎ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-4ರವರಿಗೆ ವಾಹನವನ್ನು ಬಿಡುಗಡೆ

ಮಾಡಿರುತ್ತೇನೆ. ಇಂಟಿಮಿನಿಟಿ ಬಾಂಡ್ ನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-9 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-9(ಎ) ಎಂದು ಗುರುತಿಸಲಾಯಿತು.

ಅದೇ ದಿನ ಅಪಘಾತ ಪಡಿಸಿದ ಆರೋಪಿಯಾದ ಸತೀಶ್ ಕುಮಾರ್ ವರವನ್ನು ವಿಚಾರಣೆಗೆ ಒಳಪಡಿಸಿ ದಸ್ತಗಿರಿ ಕ್ರಮ ಅನುಸರಿಸಿ ಅದೇ ಸಮಯಕ್ಕೆ ಚಾಸಾ-1ರವರನ್ನು ಬರಮಾಡಿಕೊಂಡು ಆರೋಪಿಯನ್ನು ಗುರುತಿಸಿ ನೀಡಿದ ಮರು ಹೇಳಿಕೆಯನ್ನ ಪಡೆದುಕೊಂಡಿರುತ್ತೇನೆ. ನಂತರ ಆರೋಪಿಯನ್ನು ಸೂಕ್ತ ಜಾಮೀನಿನ ಮೇಲೆ ಬಿಡುಗಡೆಗೊಳಿಸಿರುತ್ತೇನೆ.

ದಿಃ22-10-20108ರಂದು ಮೃತರ ಪಿ.ಎಂ. ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದನ್ನು ಸಾಕ್ಷಿಯು ನೋಡಿ ಗುರುತಿಸುತ್ತಿದ್ದು, ಅದನ್ನು ನಿಪಿ-8 ಎಂದು ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ8(ಎ) ಎಂದು ಗುರುತಿಸಲಾಯಿತು. ಚಾಸಾ-4 ಮತ್ತು 5ರವರಿಂದ ಅಭಿಯೋಜನೆಯ ಪರ ಸಾಕ್ಷ್ಯ ನುಡಿಯಲು ಮುಚ್ಚಳಿಕೆಯನ್ನು ಪಡೆದುಕೊಂಡಿರುತ್ತೇನೆ. ಚಾಸಾ-4ರವರಿಗೆ ವಾಹನವನ್ನು ಬಿಡುಗಡೆಯ ಸಮಯದಲ್ಲಿ ಭಾವಚಿತ್ರವನ್ನು ತೆಗೆದುಕೊಳ್ಳಲಾಗಿದೆ. ಅವುಗಳನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ಒಟ್ಟಾಗಿ ನಿಪಿ-10 ಎಂದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ನಂತರ ತನಿಖೆ ಮುಕ್ತಾಯಗೊಂಡ ಮೇರೆಗೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ ಶ್ರೀ ಎಸ್.ಆರ್.ಸಿ. ವಕೀಲರಿಂದ 2ನೇ ಆರೋಪಿಯ ಪರವಾಗಿಃ

ನಾನು ಚಾಸಾ-4 ಮತ್ತು 5ರವರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಘಟನೆ ನಡೆದಿದೆ ಎನ್ನಲಾದ ಸ್ಥಳಕ್ಕೆ ಹೋಜಾಗಿ ಯಾವುದೇ ತನಿಖೆಯನ್ನು ಮಾಡಿಲ್ಲ. ನಾನು ಠಾಣೆಯಲ್ಲಿ ಕುಳಿತು ನಿಪಿ-4ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಸಾಕ್ಷಿಗಳ ಹೇಳಿಕೆಗಳನ್ನು ಅಥವಾ ಮರು ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ನಾನು ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನುಅಪಘಾತ ನಡೆದಿದೆ ಎನ್ನಲಾದ ಸ್ದಳಕ್ಕೆ ಹೋಗಿಲ್ಲ ಅದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ವಾಹನವನ್ನು ಅಮಾತನ್ನು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಯಾವುದೇ ರೀತಿ ಆರೋಪ ಸಾಬೀತಾಗದೇ ಇದ್ದರೂ ಕೂಡ ಅವರ ವಿರುದ್ಧ ಸುಳ್ಳು

ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪರಕಣಕ್ಕೆ ಸಂಬಂಧಪಟ್ಟಂತೆ ಆರೋಪಿಯದ್ದು ಯಾವುದೇ ತಪ್ಪುಇಲ್ಲ ಎಂದರೆ ಸರಿಯಲ್ಲ.

( ಮರು ವಿಚಾರಣೆ ಇಲ್ಲ)

**( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾ.ದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸ.ಇದೆ.**

**ಅಧಿಕ ಜೆಎಂಎಫ್‌ಸಿ, ಅರಕಲಗೂಡು.**